aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Psychology (Paper 2, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Psychology

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ (2026–27) – 2

ವಿಷಯ: ಮನೋವಿಜ್ಞಾನ (32)
(ಕನ್ನಡ ಮಾಧ್ಯಮ)

ಸಮಯ: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 44**
ಗರಿಷ್ಠ ಅಂಕಗಳು: 80

ಸೂಚನೆಗಳು

1. ಪ್ರಶ್ನೆಪತ್ರಿಕೆಯು A, B, C, D ಮತ್ತು E ಎಂಬ 5 ಭಾಗಗಳನ್ನು ಒಳಗೊಂಡಿದ್ದು, I, II, III, IV, V, VI, VII ಮತ್ತು VIII ವಿಭಾಗಗಳನ್ನು ಹೊಂದಿದೆ.
2. ಎಲ್ಲಾ ಭಾಗಗಳು ಕಡ್ಡಾಯವಾಗಿವೆ.
3. ಉತ್ತರಗಳನ್ನು ಸಂಪೂರ್ಣವಾಗಿ ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆಯಬೇಕು.
4. ಭಾಗ 'A'ರ ಪ್ರಶ್ನೆಗಳಿಗೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಬರೆದಿದ್ದರೆ, ಮೊದಲು ಬರೆದ ಉತ್ತರವನ್ನು ಮಾತ್ರ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.

ಭಾಗ – ಎ

I. ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆಯ್ಕೆಮಾಡಿ. **(5 × 1 = 5)**

1. ಮೊದಲ ಮನೋವಿಜ್ಞಾನ ಪ್ರಯೋಗಾಲಯವನ್ನು ಸ್ಥಾಪಿಸಿದವರು

a. ಸಿಗ್ಮಂಡ್ ಫ್ರಾಯ್ಡ್ b. ವಿಲಿಯಂ ಜೇಮ್ಸ್ c. ಜಾನ್ ಬಿ. ವ್ಯಾಟ್ಸನ್ d. ವಿಲ್ಹೆಲ್ಮ್ ವುಂಟ್

2. ಈ ಮಾಹಿತಿಯು ಸಾಮಾನ್ಯವಾಗಿ ವೈಯಕ್ತಿಕ ಮಾಹಿತಿಯಾದ ಹೆಸರು, ವಯಸ್ಸು, ಲಿಂಗ, ಜನನ ಕ್ರಮ, ಶಿಕ್ಷಣ, ಉದ್ಯೋಗ, ವೈವಾಹಿಕ ಸ್ಥಿತಿ ಮುಂತಾದವನ್ನು ಒಳಗೊಂಡಿರುವುದು

a. ಭೌಗೋಳಿಕ ಮಾಹಿತಿ b. ಜನಸಂಖ್ಯಾ ಮಾಹಿತಿ c. ಮನೋವೈಜ್ಞಾನಿಕ ಮಾಹಿತಿ d. ಶಾರೀರಿಕ ಮಾಹಿತಿ

3. ಇದು ಎಲ್ಲಾ ಮಾಹಿತಿಯ ಶಾಶ್ವತ ಸಂಗ್ರಹಾಲಯವಾಗಿದೆ.

a. ಸಂವೇದನಾ ಸ್ಮೃತಿ b. ಅಲ್ಪಾವಧಿಯ ಸ್ಮೃತಿ c. ದೀರ್ಘಾವಧಿಯ ಸ್ಮೃತಿ d. ಕಾರ್ಯ ಸ್ಮೃತಿ

4. ಮೀನುಗಳಿಗೆ ನೀರು ಹೇಗೋ, ಮನುಷ್ಯರಿಗೆ ಗಾಳಿ ಹಾಗೆ; ಹಿಮಕ್ಕೆ ಬಿಳಿ ಬಣ್ಣ ಹೇಗೋ, ಕಲ್ಲಿದ್ದಲಿಗೆ ಕಪ್ಪು ಬಣ್ಣ ಹಾಗೆ — ಇದು ಯಾವುದಕ್ಕೆ ಉದಾಹರಣೆಯಾಗಿದೆ

a. ನಿಗಮನ ವಿವೇಚನೆ b. ಅನುಗಮನ ವಿವೇಚನೆ c. ಸಾದೃಶ್ಯ d. ನಿರ್ಧಾರ ಕೈಗೊಳ್ಳುವಿಕೆ

5. ಕೆಳಗಿನವುಗಳಲ್ಲಿ ಯಾವುದು ಜೈವಿಕ ಪ್ರೇರಣೆಯಾಗಿದೆ

a. ಸಾಧನೆ b. ಅಧಿಕಾರ c. ಹಸಿವು d. ಸಾಂಘಿಕ

II. ಆವರಣದಲ್ಲಿ ನೀಡಿರುವ ಸೂಕ್ತ ಪದಗಳಿಂದ ಖಾಲಿ ಜಾಗಗಳನ್ನು ತುಂಬಿರಿ. (5 × 1 = 5)

(ಸಂಪೂರ್ಣ ಮಿತಿ, ಶಿಶುಗಳು ಮತ್ತು ಮಕ್ಕಳು, ಭಾಷಾತ್ಮಕ, ಕ್ರಿಯಾತ್ಮಕ ಸ್ಥಿರತೆ, ಭಾಷಾ ರಹಿತ, ಬಾಂಧವ್ಯ)

6. _____ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಕ್ಷರತೆ ಅಗತ್ಯವಾಗಿದೆ.

7. ಶಿಶು ಮತ್ತು ಆರೈಕೆದಾರರ ನಡುವಿನ ಆಪ್ತ ಭಾವನಾತ್ಮಕ ಬಂಧವನ್ನು _____ ಎಂದು ಕರೆಯುತ್ತಾರೆ.

8. ನಿರ್ದಿಷ್ಟ ಸಂವೇದನಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಲು ಅಗತ್ಯವಿರುವ ಪ್ರಚೋದನೆಯ ಕನಿಷ್ಠ ಪ್ರಮಾಣವನ್ನು _____ ಎಂದು ಕರೆಯುತ್ತಾರೆ.

9. ಸಮಸ್ಯೆ ಪರಿಹಾರದಲ್ಲಿ _____ ಉಂಟಾದಾಗ, ಜನರು ಒಂದು ವಸ್ತುವಿನ ಸಾಮಾನ್ಯ ಕಾರ್ಯಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಸಮಸ್ಯೆಯನ್ನು ಪರಿಹರಿಸಲು ವಿಫಲರಾಗುತ್ತಾರೆ.

10. ಕುತೂಹಲ ಮತ್ತು ಅನ್ವೇಷಣೆಯು _____ ಗಳಲ್ಲಿ ಪ್ರಮುಖ ಪ್ರೇರಣೆಯಾಗಿದೆ.

III. ಹೊಂದಿಸಿ ಬರೆಯಿರಿ. (5 × 1 = 5)

ಅ	ಆ
1. ಅಹಂಕೇಂದ್ರಿತತೆ	a. ಅಬ್ರಹಾಂ ಮಾಸ್ಲೋ
2. ಗೆಸ್ಟಾಲ್ಟ್	b. ಹರ್ಮನ್ ಎಬ್ಬಿಂಗ್‌ಹಾಸ್
3. ಸಾಧಕ ಅನುಬಂಧನ	c. ಸ್ವಯಂ ಗಮನ
4. ವಿಸ್ಮೃತಿಯ ಅಧ್ಯಯನಗಳು	d. ಸಮಗ್ರತೆ
5. ಅಗತ್ಯಗಳ ಶ್ರೇಣೀಕರಣ	e. ಜೀವಾತ್ಮವಾದ
	f. ಬಿ. ಎಫ್. ಸ್ಕಿನ್ನರ್

IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. (5 × 1 = 5)

12. NIMHANS ಅನ್ನು ವಿಸ್ತರಿಸಿ ಬರೆಯಿರಿ.

13. 'Adolescere' ಪದದ ಅರ್ಥವೇನು?

14. ಫಿಲ್ಟರ್ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದವರು ಯಾರು?

15. ಮಾದರೀಕರಣ ಎಂದರೇನು?

16. ವೈಯಕ್ತಿಕ ಅನುಭವಗಳ ಸ್ಮೃತಿ ಗೆ ಒಂದು ಉದಾಹರಣೆ ನೀಡಿ.

ಭಾಗ – ಬಿ

V. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಏಳು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2 ರಿಂದ 3 ವಾಕ್ಯಗಳಲ್ಲಿ ಉತ್ತರಿಸಿ. **(7 × 2 = 14)**

17. ಮನೋವಿಜ್ಞಾನ ಎಂದರೇನು?

18. ವ್ಯಕ್ತಿ ಅಧ್ಯಯನ ಎಂದರೇನು?

19. ನವಜಾತ ಶಿಶುಗಳಲ್ಲಿ ಕಂಡುಬರುವ ಪ್ರಮುಖ ಪ್ರತಿವರ್ತನೆಗಳನ್ನು ಹೆಸರಿಸಿ.

20. ಎರಡು ಜ್ಯಾಮಿತೀಯ ಭ್ರಮೆಗಳನ್ನು ಹೆಸರಿಸಿ.

21. ಧನಾತ್ಮಕ ಪುನರ್ಬಲನ ಎಂದರೇನು? ಒಂದು ಉದಾಹರಣೆ ನೀಡಿ.

22. ಡಿಸ್ಲೆಕ್ಸಿಯಾ ಎಂದರೇನು? ಒಂದು ಉದಾಹರಣೆ ನೀಡಿ.

23. ಸ್ಮೃತಿಯನ್ನು ಉತ್ತಮಪಡಿಸಲು ಬಳಸುವ ಯಾವುದಾದರೂ ಎರಡು ತಂತ್ರಗಳನ್ನು ಹೆಸರಿಸಿ.

24. ಜೀವನ ಚರಿತ್ರೆಯ ಸ್ಮೃತಿ ಎಂದರೇನು?

25. ವಿಭಿನ್ನ ಆಲೋಚನೆ ಎಂದರೇನು?

26. ಪರಿಕಲ್ಪನೆಗಳು ಎಂದರೇನು?

27. ಸಾಂಘಿಕ ಪ್ರೇರಣೆ ಎಂದರೇನು? ಒಂದು ಉದಾಹರಣೆಯನ್ನು ತಿಳಿಸಿ.

ಭಾಗ – ಸಿ

VI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 10 ರಿಂದ 12 ವಾಕ್ಯಗಳಲ್ಲಿ ಉತ್ತರಿಸಿ. **(6 × 4 = 24)**

28. ಸಂಜ್ಞಾನಾತ್ಮಕ ಮನೋವಿಜ್ಞಾನ ಮತ್ತು ಜೈವಿಕ ಮನೋವಿಜ್ಞಾನದ ಕುರಿತು ಟಿಪ್ಪಣಿ ಬರೆಯಿರಿ.

29. ಮನೋವೈಜ್ಞಾನಿಕ ವಿಚಾರಣೆಯನ್ನು ನಡೆಸುವಾಗ ಮನೋವಿಜ್ಞಾನಿಯು ಅನುಸರಿಸಬೇಕಾದ ನೈತಿಕ ಮಾರ್ಗಸೂಚಿಗಳು ಯಾವುವು?

30. ಸಂದರ್ಶನ ಎಂದರೇನು? ಅದರ ವಿಧಗಳನ್ನು ವಿವರಿಸಿ.

31. ವಿಕಾಸದ ಮೇಲೆ ಜೀವಿತಾವಧಿ ದೃಷ್ಟಿಕೋನದ ಮುಖ್ಯ ಲಕ್ಷಣಗಳನ್ನು ವಿವರಿಸಿ.

32. ಹಾರ್ಲೋ ಮತ್ತು ಹಾರ್ಲೋ ಅವರು ಮರಿ ಕೋತಿಗಳ ಮೇಲೆ ನಡೆಸಿದ ಅಧ್ಯಯನದ ಆಧಾರದ ಮೇಲೆ ಶಿಶುಗಳ ಭಾವನಾತ್ಮಕ ಬೆಳವಣಿಗೆಯನ್ನು ವಿವರಿಸಿ.

33. ಅವಧಾನ ಎಂದರೇನು? ಅವಧಾನದ ಗುಣಲಕ್ಷಣಗಳನ್ನು ಬರೆಯಿರಿ.

34. ಅಂತರ್ ದೃಷ್ಟಿ ಕಲಿಕೆಯ ಕುರಿತು ಟಿಪ್ಪಣಿ ಬರೆಯಿರಿ.

35. ಮರೆವಿನ ಕಾರಣಗಳನ್ನು ವಿವರಿಸಿ.

36. ಆಲೋಚನೆಯ ಸ್ವರೂಪವನ್ನು ವಿವರಿಸಿ.

37. ಸಮಸ್ಯೆ ಪರಿಹಾರದಲ್ಲಿ ವ್ಯಕ್ತಿಯು ಎದುರಿಸಬಹುದಾದ ಅಡೆತಡೆಗಳನ್ನು ಗುರುತಿಸಿ.

ಭಾಗ – ಡಿ

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 20 ರಿಂದ 25 ವಾಕ್ಯಗಳಲ್ಲಿ ಉತ್ತರಿಸಿ. **(2 × 6 = 12)**

38. ಕೆಳಗಿನವುಗಳ ನಡುವಿನ ವ್ಯತ್ಯಾಸವನ್ನು ಬರೆಯಿರಿ:

a. ಆಪ್ತ ಸಲಹೆಗಾರ ಮತ್ತು ನೈದಾನಿಕ ಮನೋವಿಜ್ಞಾನಿ
b. ಮನೋವಿಜ್ಞಾನಿ ಮತ್ತು ಮನೋವೈದ್ಯ

39. ಪ್ರತ್ಯಕ್ಷಾನುಭವದ ಸಂಘಟನೆಯ ತತ್ವಗಳನ್ನು ವಿವರಿಸಿ.

40. ಶಾಸ್ತ್ರೀಯ ಅನುಬಂಧ ಸಹಚರ್ಯಯ ಮೂಲಕ ಕಲಿಕೆಯನ್ನು ಹೇಗೆ ಪ್ರದರ್ಶಿಸುತ್ತದೆ ವಿವರಿಸಿ.

41. ನಕಾರಾತ್ಮಕ ಸಂವೇಗಗಳನ್ನು ನಿರ್ವಹಿಸುವ ವಿಧಾನಗಳು ಯಾವುವು?

ಭಾಗ – ಇ

ಪ್ರಾಯೋಗಿಕ ಭಾಗ

VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.
(2 × 5 = 10)

42. ವರದಿಯ ನಿಖರತೆಯ ಮೇಲೆ ನಿರ್ದೇಶಿತ ಅವಲೋಕನದ ಪರಿಣಾಮವನ್ನು ಅಧ್ಯಯನ ಮಾಡಲು ನೀವು ಅನುಸರಿಸಿದ ಯೋಜನೆ ಮತ್ತು ವಿಧಾನವನ್ನು ಬರೆಯಿರಿ.

43. ಎರಡು ಸ್ನಾಯು ಸಂಬಂಧಿತ ಕಾರ್ಯಗಳ ನಡುವೆ ಅವಧಾನ ವಿಭಜಿಸುವ ಸಾಧ್ಯತೆಯನ್ನು ನಿರ್ಧರಿಸಲು ನೀವು ಅನುಸರಿಸಿದ ಯೋಜನೆ ಮತ್ತು ವಿಧಾನವನ್ನು ಬರೆಯಿರಿ.

44. ಮುಕ್ತ ಸಹಚರ್ಯಯ ಮೇಲೆ ಸಂವೇಗದ ಪರಿಣಾಮವನ್ನು ನಿರ್ಧರಿಸಲು ನೀವು ಅನುಸರಿಸಿದ ಯೋಜನೆ ಮತ್ತು ವಿಧಾನವನ್ನು ಬರೆಯಿರಿ.